ಕಾವಲಿಯ ಕೊನೆಯ ವಿಶಾಲ ಕಕ್ಷೆಯಲ್ಲಿ ಆಫ್ರಿಕನ್ನರ ಕಪ್ಪು ಅಲ್ಲದಿದ್ದರೂ ಎಣ್ಣೆಗಪ್ಪು. ಅಥವಾ ಪಾಮೆಣ್ಣೆಗಪ್ಪು ಅನ್ನಿ ಬೇಕಾದರೆ. ಪಾಂಡಿಚೇರಿ, ತಮಿಳುನಾಡಿ ಕಡೆ ಪಾಮೆಣ್ಣೆ ಬಳಕೆ ಜಾಸ್ತಿ.

ನನಗೆ ಸರ್ವಪಲ್ಲಿ ರಾಧಾಕೃಷ್ಣನ್ ನೆನಪಿಗೆ ಬಂದರು. ಅವರು ಉಪರಾಷ್ಟ್ರಪತಿ ಆಗಿದ್ದಾಗ, ಭಾರತೀಯರ ಮೈಬಣ್ಣದ ಬಗ್ಗೆ ಒಂದು ಚಂದದ ಕತೆ ಹೇಳಿದ್ದರು: ಅದು ಸುಮಾರಾಗಿ ಹೀಗಿದೆ:

ದೇವರು ಮೊದಲ ಬಾರಿಗೆ ಮನುಷ್ಯನನ್ನು ಹಿಟ್ಟಿನ ಬೊಂಬೆಯ ರೂಪದಲ್ಲಿ ಸೃಷ್ಟಿ ಮಾಡಿದನಂತೆ. ಬೊಂಬೆ ಮಾಡಿದ ಮೇಲೆ ಅದನ್ನು ಬೇಯಿಸಿ ಜೀವ ತುಂಬಬೇಕಲ್ಲ? ಬೇಯಿಸೋಣ ಅಂತ ಪೆಟ್ಟಿಗೆ ಒಲೆಯಲ್ಲಿ ಮೊದಲ ಬ್ಯಾಚಿನ ಬೊಂಬೆಗಳನ್ನು ಇಟ್ಟ. ಆದರೆ, ಹದ ಗೊತ್ತಿರಲಿಲ್ಲವಲ್ಲ? ಅದಕ್ಕೇ ತುಸು ಜಾಸ್ತಿ ಹೊತ್ತು ಆ ಸುಡುಗೂಡಿನಲ್ಲಿ ಇಟ್ಟುಬಿಟ್ಟ. ತೆಗೆದು ನೋಡಿದರೆ ಅವರೆಲ್ಲ ಕರಕಲಾಗಿ, ಅಂದರೆ ಕರಿಯ ಮನುಷ್ಯರಾಗಿದ್ದರು. ಯಾವುದಕ್ಕೂ ಇರಲಿ ಎಂದು ಅವಕ್ಕೇ ಜೀವ ತುಂಬಿ ಆಫ್ರಿಕಾ ಖಂಡಕ್ಕೆ ಕಳಿಸಿದ. ಇನ್ನೊಂದಿಷ್ಟು ಬೊಂಬೆಗಳನ್ನು ಓವನ್‌ನಲ್ಲಿ ಇಟ್ಟ. ಈ ಬಾರಿ ತುಸು ಜಲ್ದಿ, ಅಂದರೆ ಹಿಟ್ಟು ಇನ್ನೂ ಹಸಿಹಸಿ ಇದ್ದಾಗಲೇ ಹೊರಕ್ಕೆ ತೆಗೆದು ಜೀವ ತುಂಬಿದ. ನೋಡಿದರೆ ಅವರೆಲ್ಲ ಬಿಳಿಯರಾದರು. ಅವರನ್ನೆಲ್ಲ ಯುರೋಪ್ ಖಂಡದಲ್ಲಿ ಇಟ್ಟ. ಯಾಕೊ ಇದು ಸರಿಯಲ್ಲ ಅಂತ ಮೂರನೆಯ ಬ್ಯಾಚ್ ಹಿಟ್ಟಿನ ಬೊಂಬೆಗಳನ್ನು ಮಾಡಿ ಬಿಸಿಪೆಟ್ಟಿಗೆಯಲ್ಲಿ ಇಟ್ಟ. ಈ ಬ್ಯಾಚಿನ ಬೊಂಬೆಗಳನ್ನು ಹುಷಾರಾಗಿ ಪ್ರಾಯಶಃ ಟೈಮರ್ ಇಟ್ಟುಕೊಂಡು ಸರಿಯಾಗಿ ಬೇಯಿಸಿದ. ಆ ಬೊಂಬೆಗಳೆಲ್ಲ ಹದವಾಗಿ ಬೆಂದು, ಬ್ರೌನ್ ಬಣ್ಣದ ಜನರಾದರು. 'ಅಬ್ಬ! ಅಂತೂ ಸರಿ ಹೋಯ್ತು, ಜೈ' ಅಂತ ಹೇಳಿ ಅವರನ್ನೆಲ್ಲ ಭರತಖಂಡಕ್ಕೆ ಕಳಿಸಿದ. ತನ್ನ ಈ ಹೆಮ್ಮೆಯ ಸಂತಾನದ ಯೋಗಕ್ಷೇಮ ನೋಡಲೆಂದು 33 ಕೋಟಿ ದೇವತೆಗಳನ್ನೂ ಆಗಲೇ ಇತ್ತ ಕಳಿಸಿರಬೇಕು. ಬೇರೆ ಯಾವ ಖಂಡದಲ್ಲೂ ಅಷ್ಟೊಂದು ದೊಡ್ಡ ಸಂಖ್ಯೆಯ ದೇವಗಣ ಇದ್ದಂತಿಲ್ಲ.

ನಾನು ದೇವತೆಗಳ ಲೋಕದಿಂದ ಭೂಲೋಕಕ್ಕೆ ಬಂದೆ, ಏಕೆಂದರೆ ನನ್ನ ಕೈಗೂ ಒಂದು ತಟ್ಟೆ ಬಂದಿತ್ತು. ತಟ್ಟೆಗೆ ತೆಳ್ಳನ್ನ ಚಟ್ನಿ ಕೂಡ ಬಂದಿತ್ತು. ಫುಟ್‌ಪಾತಿನ ರಷ್‌ನಲ್ಲಿ ಯಾರಾದರೂ ನನಗೆ ಡಿಕ್ಕಿ ಹೊಡೆದರೆ ಚಟ್ನಿ ಚಲ್ಲಬಾರದೆಂದು ನಾನು ಆದಷ್ಟೂ ಸಮತೋಲ ತಪ್ಪದಂತೆ, ತಟ್ಟೆಯನ್ನು ಸಮತಲದಲ್ಲಿ ಹಿಡಿದಿದ್ದೆ.

